hon. Member is concerned, the hon. Member himself knows that his letter must first reach the Hon. Chief Minister and then it has to be attended to by his Private Secretary, and the Private Secretary has to pass it on to the Home Secretary and the Home Secretary has to call for a report from the concerned Police Superintendent. Naturally, all these processes take some time. However, if the hon. Member feels that there has been sufficient delay in acknowledging the letter, due consider ation will be given in future while acknowledging the letters of hon. Members.

Sri B. BHASKAR SHETTY.—May I kuow whether the Hon. Deputy Minis ter is aware that there are standing instruction to reply to the Letters written by M. L. As within three days of their receipt ?

Sri P. V. AITHALA.—For the information of hon. Member Sri Prabhakar, I would like to say, that the distance between the Police Station and the place of incident is only 2 miles. So far the arrest of 19 persons by the police is concerned, I really congratulate them. But thereafter there was lethargy in the prosecution of the case.

Mr. SPEAKER.—The hon. member has brought this matter to the notice of the House. I hope the Government will take suitable action.

Sri P. V. AITHALA.—Sir, I have a petition in this regard and I would like to submit it to the Government, through you.

Mr. SPEAKER.—It may be sent with proper endorsement.

Private Members' Bills

Mysore Legislature Salaries (Amendment) Bill, 1970

Leave to introduce

Mr. SPEAKER.—The Hon. Member Sri Thammaiah will move for leave to introduce his Bill.

12-00 NOON.

Sri H. N. NANJE GOWDA.—On a point of order, Sir. Under Rule 67 read with articles 207 and 199, it is necessary that the recommendation of the Governor has to be annexed to the notice at this stage itself.

Mr. SPEAKER.—The Hon. Member will see that this is an Expenditure Bill and strictly speaking, not a Money Bill. It is covered by clause 3 of article 207. Therefore, at this stage recommendation of the Governor is not necessary.

Sri H. N. NANJE GOWDA.—This rule is very specific. It lays down the procedure. Are you going to amend this rule also ?

Mr. SPEAKER.—It is not inconsistent with the constitutional provision. There is no objection to the introduction of the Bill without the recommendation of the Governor. It will be required at the consideration stage and not at the earlier stage.

Sri H. N. NANJE GOWDA.—I may request the hon. Member Sri Thammaiah not to introduce this Bill because the country at large may think that we are misusing our office. I request him to withdraw it; it is for him to withdraw it or proceed with it.

Sri M. NAGAPPA.—If any hon. Member takes objection to leave to introduce a Bill, it should come under Rule 71. Every member of this House has got a right to oppose the introduction of a Bill. The hon. Member Sri Nanje Gowda has opposed it and it is not for the hon. Member asking for leave to introduce the Bill to satisfy the House.

Mr. SPEAKER.—If the motion for leave to introduce a Bill is opposed by a member, it is for the mover of the motion and the opposing member to make a short statement without a debate. Thereafter the motion will be put to vote.

Sri H. SIDDAVEERAPPA.—Sir, I want a clarification from the hon. Member whether he has obtained the Governor's permission because there is an expenditure statement and no Bill involving expenditure can be introduced without the prior permission of the Governor. The Governor gives consent only on the recommendation of the Government and so I would like to know whether the Government has recommended it to the Governor.

Mr. SPEAKER.—This point has been raised by the hon. Member Sri Nanje Gowda and I have already explained that this is a Bill which does not require the recommendation of the Governor for its introduction. The recommendation of the Governor is required only at the consideration stage and not earlier.

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ, ಈ ಮಸೂದೆ ವಿಧಾನಸಭೆಯು ಮುಂದೆ ಬರಬೇಕಾದರೆ ತಮ್ಮ ಒಪ್ಪಿಗೆ ಬೇಕು. ಈಗ ಅದಕ್ಕೆ ತಾವು ಒಪ್ಪಿಗೆ ಕೊಡುವಾರದೆಂದು ನಾನು ಅಭಿಪ್ರಾಯ ಸೂಚಿಸುತ್ತೇನೆ.

Sri K. M. THAMMAIAH (Kadur).—Sir, I beg the leave of the House to introduce the Mysore Legislature Salaries (Amendment) Bill, 1970.

Mr. SPEAKER.—The motion is:

> "That leave be granted to introduce the Mysore Legislature Salaries (Amendment) Bill, 1970."

Since objection is taken by some hon. Members the mover of the motion may make a short statement as to why he wants to move this Bill.

†ಶ್ರೀ ಕೆ. ಎಂ. ತಮ್ಮಯ್ಯ.—ಸಭಾಪತಿಗಳೇ ಈ ಕಾಲದಲ್ಲಿ ಶಾಸನಕರಿಗೆ ಫೋಸ್ಟೇಜು ಮತ್ತು ಟೆಲಫೋನ್‌ಗೆ ತಗಲುತಕ್ಕ ವೆಚ್ಚವನ್ನು ಪರಿಗಣಿಸಿ ನಮ್ಮ ಕರ್ತವ್ಯವನ್ನು ನರಿಯಾದ ರೀತಿಯಲ್ಲಿ ನಿರ್ವಹಿಸಲು ತಕ್ಕ ವ್ಯವಸ್ಥೆಯನ್ನು ಮಾಡಬೇಕೆಂಬ ಒಂದು ಉದ್ದೇಶದಿಂದಲೂ ಮತ್ತು ಇತರ ರಾಜ್ಯಗಳಲ್ಲಿ

ಇದೇತರಹ ಬಿಲ್ಲನ್ನು ತಂದು ಅಲ್ಲಿನ ಶಾಸಕರಿಗೆ ಈ ಅನುಕೂಲಗಳನ್ನು ಕಲ್ಪಿಸಿಕೊಟ್ಟಿರುವುದರಿಂದಲೂ ಮತ್ತು ಮೊನ್ನೆ ಮೊನ್ನೆ ಪಾರ್ಲಿಮೆಂಟ್ ಮೆಂಬರುಗಳಿಗೆ ಟೆಲಿಫೋನ್ ಮತ್ತು ಪೋಸ್ಟೇಜ್ ವ್ಯವಸ್ಥೆ ಮಾಡಲಿಕ್ಕೆ ಅವಕಾಶ ಕೊಟ್ಟಿರುವುದರಿಂದಲೂ ಈ ಒಂದು ಬಿಲ್ಲನ್ನು ನಾನು ಇಂಟ್ರೊಡ್ಯೂಸ್ ಮಾಡಿದ್ದೇವೆ. ನಮಗೆ ಇದರ ಅವಶ್ಯಕತೆ ಹೆಚ್ಚಾಗಿರುವುದರಿಂದ ಇದನ್ನು ಮಾನ್ಯ ಸದಸ್ಯರು ಒಪ್ಪ ಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಎನ್. ನಂಜೇಗೌಡ.—ಮಾನ್ಯ ಅಧ್ಯಕ್ಷರೇ, ನನಗೆ ಶ್ರೀಮಾನ್ ಕೆ. ಎಂ. ತಮ್ಮಯ್ಯನವರನ್ನು ಕಂಡರೆ ಭಾರಿ ಅಭಿಮಾನ, ನಂಬಿಕೆ ಇದೆ. ನನಗೂ ಅವರಿಗೂ ಭಾರಿ ಸ್ನೇಹ, ಭಾರಿ ಅನ್ಯೋನ್ಯ. ಅವರು ಈ ಬಿಲ್ಲನ್ನು ಅವರ ಸ್ವಂತ ಇಚ್ಛೆಯಿಂದ ತಂದಿದ್ದಾರೆಯೇ ಅಥವಾ ಇತರರ ಇಚ್ಛೆಯಂತೆ ಅಥವಾ ಸರ್ಕಾರದ ವತಿಯಿಂದ ತಂದಿದ್ದಾರೆಯೇ ಅಂತ ಹೇಳಿ ಅನುಮಾನ ಬರುತ್ತಾ ಇದೆ.

ಶ್ರೀ ಕೆ. ಎಂ. ತಮ್ಮಯ್ಯ.—ಈ ಸಭೆಯ 45 ಜನ ಮಾನ್ಯ ಸದಸ್ಯರು ಇದಕ್ಕೆ ರುಜು ಮಾಡಿ ಕೊಟ್ಟಿದ್ದಾರೆ. ಇವರೆಲ್ಲರೂ ರುಜು ಮಾಡಿಕೊಟ್ಟು ಇಂತಹ ಒಂದು ಬಿಲ್ಲನ್ನು ತರಬೇಕೆಂದು ಹೇಳಿದ್ದರಿಂದ ತಂದಿದ್ದೇನೆ.

ಶ್ರೀ ಎಚ್. ಎನ್. ನಂಜೇಗೌಡ.—ನನ್ನ ಆಕ್ಷೇಪಣೆ ಇಷ್ಟೆ. ಈ ರಾಜ್ಯದಲ್ಲಿ ಬಹಳ ಜನ ಕಷ್ಟದಲ್ಲಿ ಇದ್ದಾರೆ. ಬಹುಶಃ ಇವತ್ತು ಅಧಿಕಾರ ನಿಮ್ಮ ಕೈಯಲ್ಲಿ ಇದೆ ಅಂತ ಹೇಳಿ 250 ರೂಪಾಯಿ ಇದ್ದದ್ದನ್ನು 400 ರೂಪಾಯಿ ಮಾಡಿಕೊಂಡದ್ದಾಯಿತು. ಬಸ್ಸುಗಳಲ್ಲಿ ಓಡಾಡುವುದಕ್ಕೆ ಅನುಕೂಲ ಮಾಡಿಕೊಂಡದ್ದಾಯಿತು. ಈಗ ಟೆಲಿಫೋನ್ ಪೋಸ್ಟೇಜ್ ಸೌಕರ್ಯ ಬೇಕೆಂದು 100 ರೂಪಾಯಿ ಕೇಳುತ್ತಾ ಇದ್ದೀರಿ. ರಾಜ್ಯದಲ್ಲಿ ಹಣಕಾಸಿನ ಪರಿಸ್ಥಿತಿ ಚೆನ್ನಾಗಿಲ್ಲದೇ ಇರುವಾಗ, ನಾನಾ ಕಷ್ಟನಷ್ಟಗಳು ಆಗುತ್ತಾ ಇರತಕ್ಕ ಕಾಲದಲ್ಲಿ ಒಂದು ಹೊತ್ತಿಗೆ ಊಟಕ್ಕೆ ಇಲ್ಲದೇ ಇರತಕ್ಕ ಜನ ಇವತ್ತು ನಮ್ಮ ಕಡೆಗೆ ನೋಡುತ್ತಾ ಇದ್ದಾರೆ. ಈ ರೀತಿ ಮಾಡುತ್ತಾ ಹೋದರೆ ಹೊಟ್ಟೆಗೆ ಇಲ್ಲದ ಜನ ನಕ್ಸಲೈಟ್ಸೂ ಆಗುತ್ತಾರೆ, ಕಮ್ಯೂನಿಸ್ಟೂ ಆಗುತ್ತಾರೆ. ನಾವು ಬಹಳ ಜವಾಬ್ದಾರಿ ಇರತಕ್ಕ ಜನ, ಈ ದೇಶದ ಕಾರ್ಯನಿರ್ವಹಣೆ ಮಾಡತಕ್ಕ ಜನತಾ ಪ್ರತಿನಿಧಿಗಳು ಅನ್ನತಕ್ಕವರು ಈ ರೀತಿ ಮನಸ್ಸೋ ಇಚ್ಛೆ ಮಾಡುವುದು ಸರಿಯಲ್ಲ. ಇದರಿಂದ ಜನತೆ ರಾಲೆಸ್ ಆಗಿ ಶ್ರೀಮಾನ್ ಗೋಪಾಲಗೌಡರು ಹಿಂದೆ ಒಂದು ಸಾರಿ ಹೇಳುತ್ತಾ ಇದ್ದರು ಮೇಷ್ಟ್ರರು ನಿಂತುಕೊಂಡು ಉಚ್ಚೆ ಹೊಯ್ದರೆ, ಹುಡುಗರು ಓಡಾಡಿಕೊಂಡು ಹೊಯ್ಯುತ್ತಾರೆ ಅಂತ. ಆ ರೀತಿ ಆಗಬಾರದು. ಜನತೆಯಲ್ಲಿ ದುರಭಿಪ್ರಾಯ ಮೂಡುವಂತಹ ಈ ಕಾರ್ಯ ಮಾಡುವುದು ಸಾಧುವಲ್ಲ, ಧರ್ಮವಲ್ಲ, ಮತ್ತು ನ್ಯಾಯಬದ್ಧವಲ್ಲ ಎಂದು ಹೇಳಿ ಈ ಮಸೂದೆಯನ್ನು ವಿರೋಧಿಸುತ್ತೇನೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—45 ಜನ ಸೈನ್ ಮಾಡಿರತಕ್ಕವರಲ್ಲಿ ಶ್ರೀಮಾನ್ ನಂಜೇಗೌಡರೂ ಒಬ್ಬರು, ಅವರೂ ಈ ಬಿಲ್‌ಗೆ ಸಪೋರ್ಟ್ ಮಾಡಿ ಸೈನ್ ಮಾಡಿ ಈಗ ಅಬ್ಜೆಕ್ಷನ್ ಹಾಕುತ್ತಾ ಇದ್ದಾರೆ ಎಂದು ಮಾನ್ಯ ತಮ್ಮಯ್ಯನವರು ಹೇಳುತ್ತಾ ಇದ್ದಾರೆ.

Sri H. N. NANJE GOWDA.—ಅದು ನನ್ನ ಸೈನ್ ಅಲ್ಲ ಫೋರ್ಜರಿ ಇರಬೇಕು. You should prove it. I have not signed such a thing. I am not a person to sign such a proposal. Even today I stand by it. I have not used a single ticket on the Bus.

†ಶ್ರೀ ಎಚ್. ಎಂ. ಚನ್ನಬಸಪ್ಪ.—ಸ್ವಾಮಿ, ಈ ಬಿಲ್ಲನ್ನು ಇಂಟ್ರೊಡ್ಯೂಸ್ ಮಾಡುವಾಗ ಎರಡು ಕಾರಣಗಳನ್ನು ಕೊಟ್ಟರು. ಒಂದನೆಯದು 45 ಜನ ಸೈನ್ ಮಾಡಿದ್ದಾರೆ, ನಾನು ಒಬ್ಬನೇ ತಂದಿಲ್ಲ ಅಂತ ಹೇಳಿದರು. ಎರಡನೆಯದು ಟೆಲಿಫೋನು, ಪೋಸ್ಟೇಜು ಮತ್ತು ಇತರ ಖರ್ಚು ವೆಚ್ಚಗಳಿಗೆ ದುಡ್ಡು ಸಾಲದು ಎಂಬುದು. ಈ ಎರಡು ಕಾರಣಗಳ ಏನಃ ಇನ್ನು ಏನೂ ಕಾರಣ ಕೊಡಲಲ್ಲ. ನಾನು ಈ ಸಭೆಗೆ ತಿಳಿಸುವುದಾದರೆ ಲೇಡಿಸ್ಲೇಟರ್ಸ್‌ಗೆ ಟಿ ಎ, ಡಿ ಎ ಜಾಸ್ತಿ ಮಾಡಿ ಕೊಟ್ಟಿದ್ದಾರೆ, ಅನೇಕ ಸೌಲಭ್ಯಗಳನ್ನು ಮಾಡಿಕೊಟ್ಟಿದ್ದಾರೆ. ಈ ರಾಜ್ಯದಲ್ಲಿ ಎಲ್ಲ ಬೇಕಾದರೂ ಫ್ರೀಯಾಗಿ ಬಸ್‌ನಲ್ಲಿ ಹೋಗತಕ್ಕ ವ್ಯವಸ್ಥೆ ಇದೆ. ಮತ್ತು ಎರ್ಲಾ ಕಾಲದಲ್ಲೂ ಕೂಡ ಫ್ರೀಮೆಡಿಕಲ್ ಅಸಿಸ್ಟೆನ್ಸ್ ಇದೆ. ಮೂರನೆಯದು ಬೆಂಗಳೂರಿಗೆ ಬಂದಾಗಲೆಲ್ಲಾ ಲೆಜಿಸ್ಲೇಟರ್ಸ್ ಹೋಂನಲ್ಲಿ ನಬ್ಬಿಡ್ಯೆಸ್ಡ್ ರೇಟ್‌ನಲ್ಲಿ ಅಕಾಮೊಡೇಷನ್ ವಗ್ಗೈರೆ ಇದೆ. ನಮ್ಮ ಕಾರ್ಯ ಸುಗಮವಾಗಿ ನಡೆಯಬೇಕಾದರೆ ಇಷ್ಟೇ ಹಣ ಬೇಕಾಗುತ್ತದೆ ಎಂದು ಹೇಳಿ ನಿರ್ಧರ ಮಾಡಬೇಕಾದರೆ ಒಬ್ಬೊಬ್ಬರಿಗೆ ಒಂದೊಂದು ರೀತಿಯಲ್ಲಿ ಆಗುತ್ತದೆ. ಆದ್ದರಿಂದ ಮಾನ್ಯ ಸದಸ್ಯರು ಅಕ್ಯುಯರ್ ಆಗಿ ಈ ನಮ್ಮ ಕಾರ್ಯನಿರ್ವಹಣೆಗೆ ಸಂಬಂಧಪಟ್ಟಂತೆ ಯಾವಾಪುದಕ್ಕೆ ಎಷ್ಟೆಷ್ಟು ಹಣ ಖರ್ಚು ಮಾಡಿದ್ದೇವೆ

(ಶ್ರೀ ಎಚ್. ಎಂ. ಚನ್ನಬಸಪ್ಪ)

ಹನ್ನೆರಡು ತಿಂಗಳಿಗೆ ಎಂಬ ಪಟ್ಟಿಯನ್ನು ಹಾಕಿ 400 ರೂಪಾಯಿ ಸಾಲುವುದಿಲ್ಲ, ಸಾವಿರ ರೂಪಾಯಿ ಖರ್ಚಾಗುತ್ತಾ ಇದೆ ಎಂದು ಸ್ಟೇಟ್‌ಮೆಂಟ್ ಆಫ್ ಎಕ್ಸ್‌ಪೆಂಡೀಚರ್ ಈ ಸಭೆಯ ಮುಂದೆ ಇಟ್ಟಿದ್ದರೆ ಚೆನ್ನಾಗಿತ್ತು. ಒಂದು ಶಾಸನವನ್ನು ಮಾಡಬೇಕಾದರೆ ಅಂಕಿಅಂಶಗಳನ್ನು ಆಧಾರವಾಗಿಟ್ಟುಕೊಂಡು ಮಾಡಬೇಕಾಗುತ್ತದೆ. ಆ ರೀತಿ ಮಾಡಿದ್ದೇ ಆದರೆ ಜನರಲ್ಲಿ ಅತೃಪ್ತಿ ಉಂಟಾಗುವುದಕ್ಕೆ ಅವಕಾಶವಿಲ್ಲ. ನನ್ನ 30-40 ವರ್ಷಗಳ ಅನುಭವ ಹೇಳುವುದಾದರೆ ಈಗ ನಾವು ಕಲ್ಪಿಸಿಕೊಂಡಿರತಕ್ಕ ಸೌಲಭ್ಯ ಏನಿದೆ ಇದು ಬೇಕಾದಷ್ಟು ಅಯಿತು. ಇದನ್ನು ಹೆಚ್ಚು ಮಾಡುವುದರಲ್ಲಿ ಹುರುಳಿಲ್ಲ, ಹಾಗೆ ಮಾಡಿದರೆ ನಮ್ಮ ಅಧಿಕಾರದ ದುರುಪಯೋಗ ಮಾಡಿಕೊಂಡ ಹಾಗಾಗುತ್ತದೆ. ಆದ್ದರಿಂದ ನಾನಂತೂ ಈ ಅಧಿಕಾರದ ದುರುಪಯೋಗ ಮಾಡಿಕೊಳ್ಳುವದಕ್ಕೆ ತಯಾರಾಗಿಲ್ಲ ಎಂದು ಇಷ್ಟು ಮಾತ್ರ ಹೇಳುತ್ತೇನೆ.

†ಶ್ರೀ ಟಿ. ಆರ್. ಶಾಮಣ್ಣ.—ಸನ್‌ಮಾನ್ಯ ಸಭಾಪತಿಯವರೇ, ಬೇರೆ ಯಾರಾದರೂ ಈ ಮನೂದೆಯನ್ನು ತೆಗೆದುಕೊಂಡು ಬಂದಿದ್ದರೆ ನಾನು ಈ ರೀತಿ ಯೋಚನೆ ಮಾಡುತ್ತಾ ಇರಲಿಲ್ಲ. ಆದರೆ ಮಾನ್ಯ ತಮ್ಮಯ್ಯನವರು ಇಂತಹ ಬಿಲ್ಲನ್ನು ತೆಗೆದುಕೊಂಡು ಬಂದಿರತಕ್ಕದ್ದು ಅಷ್ಟು ಸೂಕ್ತವಾಗಿ ಕಾಣಲಿಲ್ಲ. ಚುನಾವಣೆಗಳು ಆದ ಮೇಲೆ ಈ ಸಭೆಯ ಮಾನ್ಯ ಸದಸ್ಯರುಗಳು ತಮ್ಮ ಸಂಬಳ ಮತ್ತು ಆಲೋಯನ್ಸ್‌ಗಳನ್ನು ಹೆಚ್ಚಿಸಿಕೊಂಡಿದ್ದಾರೆ. ಈ ಸಭೆಗೆ ನಾವು ಬಂದಿರತಕ್ಕದ್ದು ಸೇವಾ ಮನೋಭಾವದಿಂದ ಹೊರತು ಈ ಒಂದು ಸಂಬಳದ ಬಗ್ಗೆ ಎಂದು ನಾನು ತಿಳಿದುಕೊಂಡಿಲ್ಲ. ಅನೇಕ ಮಾನ್ಯ ಸದಸ್ಯರು ತಾವು ಮಾಡತಕ್ಕಂಥ ವೃತ್ತಿಯಲ್ಲಿ ಸಾವಿರಾರು ರೂಪಾಯಿಗಳನ್ನು ಕಳೆದುಕೊಂಡು ಒಂದು ಇಲ್ಲಿ ಕೂತಿರುತ್ತಾರೆ. ಈಗ ನಮ್ಮ ದೇಶದಲ್ಲಿ ಎರಡು ಹೊತ್ತು ಊಟಕ್ಕೆ ಅವಕಾಶ ಮಾಡಿಕೊಡುವುದಕ್ಕೆ ಆಗದೆ ಇರುವಾಗ ಈ ಜನಗಳ ಪ್ರತಿನಿಧಿಗಳಾಗಿ ಅಧಿಕಾರ ನಮ್ಮ ಕೈಯ್ಯಲ್ಲಿ ಇದೆ ಅಂತ ಹೇಳಿ ನಮ್ಮ ಸೌಲಭ್ಯಗಳನ್ನು ಹೆಚ್ಚು ಮಾಡಿಕೊಳ್ಳುತ್ತಾ ಹೋದರೆ ನಾವು ನಿಜವಾಗಿಯೂ ದೇಶಕ್ಕೆ ಒಳ್ಳೆಯದು ಮಾಡುವುದಕ್ಕಾಗುವುದಿಲ್ಲ. ಈಗ ಕೊಡುತ್ತಾ ಇರತಕ್ಕಂಥ 250 ರೂಪಾಯಿ ಸಂಬಳ ಮತ್ತು 150 ರೂಪಾಯಿ ಆಲೋಯನ್ಸ್ ಈಗಿನ ಸಾಧಾರಣವಾದ ಪರಿಸ್ಥಿತಿಯಲ್ಲಿ ಸರಿಯಾಗಿದೆ. ಇದನ್ನು ಇನ್ನೂ ಹೆಚ್ಚಿಸಿದ ಪಕ್ಷದಲ್ಲಿ ಜನಗಳಿಗೆ ಉಪಕಾರವನ್ನು ಮಾಡುವುದಕ್ಕೆ ಬಂದಿಲ್ಲ, ನಮ್ಮ ಅನುಕೂಲಗಳನ್ನು ಮಾತ್ರ ಹೆಚ್ಚಿಸಿ ಕೊಳ್ಳುವುದಕ್ಕೆ ಬಂದಿದ್ದೇವೆ ಎಂದು ಆಗುತ್ತದೆ. ನಮ್ಮ ಸಭೆನಡೆಯತಕ್ಕ ಅರು ಗಂಟೆ ಕಾಲದಲ್ಲಿ ಸುಮಾರು ಒಂದು ಗಂಟೆ ಬಿಜಿನೆಸ್ ಆಗತಕ್ಕದ್ದು, ಮಿಕ್ಕ 5 ಗಂಟೆಗಳನ್ನು ನಾನಾವಿಧವಾದ ಕುಂದುಕೊರತೆಗಳನ್ನು ಪರಿಶೀಲಿಸಲು ಉಪಯೋಗಿಸಿ ಕಾಲಹರಣ ಮಾಡುವಾಗ ಇನ್ನೂ ಸಂಬಳವನ್ನು ಹೆಚ್ಚಿಸಿಕೊಂಡರೆ ಹೇಗೆ ? ಮಾನ್ಯ ತಮ್ಮಯ್ಯನವರು ಹೆಚ್ಚಿನ ಸೌಲಭ್ಯವನ್ನು ಪಡೆಯುತ್ತಾ ಇದ್ದಾರೆ. ಅರಮನೆಯಂತಹ ಮನೆಗಳು ಇವೆ. ಎಲ್ಲಾ ವಿಧವಾದ ಸೌಲಭ್ಯಗಳು ಇವೆ. ಮಂತ್ರಿಗಳು 500 ರೂಪಾಯಿಗಳಿಂಗಿತ ಹೆಚ್ಚಿನ ಸಂಬಳವನ್ನು ತೆಗೆದುಕೊಳ್ಳಬಾರದು ಎಂದು ಒಂದು ಬಿಲ್ಲನ್ನು ತಂದಿದ್ದರೆ ಮಾನ್ಯ ತಮ್ಮಯ್ಯನವರನ್ನು ಸ್ವಾಗತಿಸುತ್ತಿದ್ದೆ. ಈ ಬಿಲ್ಲನ್ನು ಖಂಡಿತ ತೆಗೆದುಕೊಳ್ಳಬಾರದು ಎಂದು ಹೇಳುತ್ತೇನೆ. ಇದನ್ನು ಓಟಿಗೆ ಹಾಕುವುದಕ್ಕೆ ಅವಕಾಶ ಕೊಡದೆ ನನ್ನ ಮಿತ್ರರಾದ ಮಾನ್ಯ ತಮ್ಮಯ್ಯನವರು ದೊಡ್ಡ ಮನಸ್ಸು ಮಾಡಿ ಜನಗಳ ಹಿತದೃಷ್ಟಿಯಿಂದ ಈ ಬಿಲ್ಲನ್ನು ವಾಪಸ್ ತೆಗೆದುಕೊಳ್ಳಬೇಕೆಂದು ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಾವು ಪ್ರತಿನಿಧಿಗಳಾಗಿ ಬಂದ ಮೇಲೆ ಒಂದು ಬ್ಯಾಲನ್ಸ್ ಷೀಟ್ ಹಾಕಿ ಕೊಂಡು ಜನಗಳಿಗೆ ಎಷ್ಟು ಅನುಕೂಲವಾಗಿದೆ ಎಷ್ಟು ಕೆಲಸಗಳಾಗ ಬೇಕಾಗಿದೆ ಎಂದು ನೋಡಬೇಕೇ ಹೊರತು ಬೇರೆ ಕಡೆ ಸಂಬಳಗಳನ್ನು, ಆಲೋಯನ್ಸ್‌ಗಳನ್ನು ಜಾಸ್ತಿಮಾಡಿಕೊಂಡಿದ್ದಾರೆ ಎಂದು ನಮ್ಮ ದೇಶದಲ್ಲಿಯೂ ಕೂಡ ಆ ರೀತಿ ಅನ್ಯಾಯ ಮಾಡಬಾರದೆಂದು ಮಾನ್ಯ ತಮ್ಮಯ್ಯನವರನು ಮತ್ತೊಮ್ಮೆ ವಿನಯಪೂರ್ವಕವಾಗಿ ಪ್ರಾರ್ಥಿಸಿ ಈ ಬಿಲ್ಲನ್ನು ಖಂಡಿತ ವಾಪಸ್ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. 45 ಜನ ಸದಸ್ಯರು ಸಹಿ ಹಾಕಿರಬಹುದು. ಆದರೆ ಇನ್ನು ಉಳಿದ 160 ಜನರು ಬೇಡ ಎಂದು ಹೇಳುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ದಯವಿಟ್ಟು ಈ ಬಿಲ್ಲನ್ನು ವಾಪಸ್ಸು ತೆಗೆದುಕೊಳ್ಳಿ. ಓಟಿಗೆ ಹಾಕಿ ಜನಗಳ ಕೈಯಲ್ಲಿ ನಮ್ಮನ್ನು ಅಯ್ಯೋವಂಥ ಪರಿಸ್ಥಿತಿಗೆ ತೆಗೆದುಕೊಂಡು ಹೋಗಬಾರದೆಂದು ವಿನಯದಿಂದ ಪ್ರಾರ್ಥನೆ ಮಾಡುತ್ತೇನೆ. ಕಾಯಿದೆಗಳನ್ನು ಸಿದ್ಧಪಡಿಸತಕ್ಕ ನಾವೇ ಈ ಕಾಯಿದೆಯನ್ನು ಸ್ವಾರ್ಥಕ್ಕೆ ಉಪಯೋಗಿಸಿಕೊಳ್ಳುವುದು ಒಳ್ಳೆಯದಲ್ಲ ಎಂದು ಹೇಳುತ್ತೇನೆ. ಮಾನ್ಯ ತಮ್ಮಯ್ಯನವರಿಗೆ ನೂರು ರೂಪಾಯಿಗಳಿಂದ ಸಾವಿರ ರೂಪಾಯಿಗಳ ವರೆಗೆ ಸಂಪಾದಿಸತಕ್ಕ ಶಕ್ತಿ ಇದೆ. ಆದುದರಿಂದ ಈ ಬಿಲ್ಲನ್ನು ವಾಪಸ್ ತೆಗೆದುಕೊಳ್ಳಬೇಕೆಂದು ಮತ್ತೊಮ್ಮೆ ಅವರನ್ನು ಕೇಳಿಕೊಳ್ಳುತ್ತೇನೆ.

†ಶ್ರೀ ಎಚ್. ಬಿ. ಜ್ಞಾನಲನಯ್ಯ.—ಮಾನ್ಯ ಸಭಾಧ್ಯಕ್ಷರೇ, ನನ್ನ ಮಿತ್ರರಾದಂಥ ತಮ್ಮಯ್ಯ ನವರು ಸಭೆಯ ಮುಂದೆ Ligislators Salary Amendment Billನ್ನು introduce ಮಾಡ ಬೇಕೆಂದು ಕೇಳಿದ್ದಾರೆ. ಆದರೆ ಅವರೇ ಹೇಳಿದ ಹಾಗೆ, ಈ ಬಿಲ್ಲು ನನ್ನದು ಅಲ್ಲ, ಇದಕ್ಕೆ 40-45 ಜನ ಸಹಿ ಹಾಕಿದ್ದರಿಂದ ಇದನ್ನು ತಂದಿದ್ದೇನೆ ಅಂತ ಹೇಳಿದ್ದಾರೆ. ಆದ್ದರಿಂದ ಈ ವಿಷಯದಲ್ಲಿ ಅವರು ಆಸಕ್ತಿ ಪಡೆದಿಲ್ಲ ಎಂದು ಕಾಣುತ್ತದೆ. ನನ್ನ ಮಿತ್ರರು ಹೇಳಿದಹಾಗೆ, ದೇಶದಲ್ಲಿ ಈ ಸಭೆಯು ಏನು ಕಾರ್ಯಕಲಾಪಗಳನ್ನು ನಡೆಸುತ್ತಾ ಇದೆ ಎಂದು ನಮಗ್ರು ರಾಜ್ಯದ ಜನತೆ ನೋಡುತ್ತಾ ಇರುವ ಈ ಸಂದರ್ಭದಲ್ಲಿ ಮುತ್ತು ನಾವೇ ಕಾನೂನು ದೃಷ್ಟಿಯಿಂದ ಏನು ಬೇಕಾದರೂ ಮಾಡುವ ಹಕ್ಕನ್ನು ಪಡೆದಿರುವುದರಿಂದ, ದೇಶದ ಹಣವನ್ನು ಉಳಿತಾಯಮಾಡಿ ಎರ್ಲಾ ಕ್ಷೇತ್ರ ದಲ್ಲಿಯೂ ಖರ್ಚನ್ನು ಕಡಿಮೆಮಾಡಬೇಕಾಗಿದೆ. ಹಾಗಿರುವಾಗ ಮಾನ್ಯ ಸದಸ್ಯರು ಹೇಳುವುದನ್ನು ಒಪ್ಪುವುದಕ್ಕೆ ಬಹಳ ಕಷ್ಟವಾಗುತ್ತದೆ. ಟೆಲಿಫೋನ್ ಮತ್ತು ಪೋಸ್ಟೇಜ್ ಚಾರ್ಜಸ್ ನಮ್ಮ ಮಾನ್ಯ ತಮ್ಮಯ್ಯನವರು ಅಸೆಂಬ್ಲಿ ಸದಸ್ಯರಾಗಿದ್ದರೂ ಖರ್ಚಾಗುತ್ತದೆ, ಸದಸ್ಯರು ಆಗಿಲ್ಲದಿದ್ದರೂ ಖರ್ಚಾಗುತ್ತದೆ ಆದುದರಿಂದ ಮಾನ್ಯ ಸದಸ್ಯರಾದ ತಮ್ಮಯ್ಯನವರು ಈ ವಿಷಯದಲ್ಲಿ ಹೆಚ್ಚಿನ ಒತ್ತಾಯವನ್ನು ಮಾಡುವುದಿಲ್ಲ ಎಂದು ತಿಳಿದುಕೊಳ್ಳುತ್ತೇನೆ. ಯಾಕೆಂದರೆ ಅವರೇ ಮುಂದೆ ಬಂದು ಇಂತಹ ಒಂದು ಬಿಲ್ಲನ್ನು ತಂದಿಲ್ಲ. ಅನೇಕರ ಒತ್ತಾಯದಿಂದ ತಂದಿದ್ದಾರೆಂದು ಹೇಳು ತ್ತಾರೆ. ಅವರು ಈ ಬಿಲ್ಲನ್ನು ಮಾನ್ಯ ಸದಸ್ಯರಾದ ಶ್ರೀಮಾನ್ ಶಾಮಣ್ಣನವರು ಹೇಳಿದಹಾಗೆ ವಾಪಸ್ ತೆಗೆದುಕೊಂಡು ಸಭೆಗೆ ಸಮಾಧಾನವನ್ನು ತಂದುಕೊಡಬೇಕು ಮತ್ತು ರಾಜ್ಯದಲ್ಲಿರುವ ಜನತೆಯ ವಿಚಾರದಲ್ಲಿ ಗುತ್ತುವಾದ ನಿರ್ಣಯವನ್ನು ತೆಗೆದುಕೊಂಡುಬರಬೇಕೆಂದು ಹೇಳುತ್ತೇನೆ. ಮಾನ್ಯ ತಮ್ಮಯ್ಯನವರು ಈ ವಿಷಯದಲ್ಲಿ ಹೆಚ್ಚು ಒತ್ತಾಯ ಮಾಡುವುದಿಲ್ಲ. ಅಂತ ತಿಳಿದುಕೊಂಡು ನನ್ನ ಭಾಷಣವನ್ನು ಮುಗಿಸುತ್ತೇನೆ.

†ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದಂಥ ತಮ್ಮಯ್ಯನವರು ಮುಂದೆ ಮಾಡಿರತಕ್ಕ ಈ ಮಸೂದೆಯನ್ನು ಕುರಿತು ಮಾತನಾಡುವಾಗ ಹಿಂದಿನ ಸಲ ಇದೇ ಸದನದಲ್ಲಿ ಸಧಸ್ಯರುಗಳ ಸಂಬಳ ಹೆಚ್ಚಿಗೆ ಆಗಬೇಕು ಎನ್ನುವ ವಿಷಯ ಪ್ರಸ್ತಾಪ ಬಂದಿದ್ದು ನನಗೆ 250 ರೂಪಾಯಿಗಳು ಇದ್ದದ್ದನ್ನು 400 ರೂಪಾಯಿಗಳಿಗೆ ಮಾಡಿಕೊಳ್ಳ ಬೇಕಾದರೆ ಹಲವಾರು ಮಾನ್ಯ ಸದಸ್ಯರು ತಮ್ಮ ತಮ್ಮ ಅಭಿಪ್ರಾಯಗಳನ್ನು ಕೊಟ್ಟಿದ್ದರು. ಅದೇ ಅಭಿಪ್ರಾಯ ಈಗಲೂ ಸಹ ಇದೆ. ಆದುದರಿಂದ ಹಲವಾರು ಕಾರಣಗಳಿಂದ ಈ ಮಸೂದೆಯನ್ನು ವಿರೋಧ ಮಾಡಬೇಕಾಗುತ್ತದೆ. ಆದರೆ ಮಸೂದೆಯಲ್ಲಿ ಒಳಗೊಂಡಿರತಕ್ಕ ಅಂಶಗಳು ಸಂಪೂರ್ಣವಾಗಿ ಸುಳ್ಳು ಎಂದು ತೊಡೆದುಹಾಕುವುದಕ್ಕೆ ನಾನು ತಯಾರಾಗಿಲ್ಲ. ಈಗ ಒಬ್ಬ ಸದಸ್ಯ ಈಗಿನ ರಾಜಕೀಯ ಪದ್ಧತಿಯಲ್ಲಿ ತನ್ನ ಕೆಲಸ ಕಾರ್ಯಗಳನ್ನು ಯಾವ ರೀತಿ ಮಾಡಬಲ್ಲ, ಅವನಿಗೆ ಸ್ವತಃ ಎಷ್ಟು ಖರ್ಚಾಗುತ್ತದೆ ಎಂದು ಆರೋಚವೆ ಮಾಡಿದರೆ, ನನಗೆ ಗೊತ್ತಿರುವಹಾಗೆ ಅವನಿಗೆ ಸ್ವಾಪಿರ ರೂಸಾಯಿಗಳಾದರೂ ಸಾಲದು ಎನ್ನುವ ಭಾವನೆ ಇದೆ. ನಮಗೆ 250 ರೂಪಾಯಿ ಇದ್ದುದು 400 ರೂಪಾಯಿಗಳು ಆಗಬೇಕಾದರೆ ಸಾಕಷ್ಟು ವಿಷಯ ಯೋಚನೆ ಮಾಡಿದ್ದಾರೆ. ಮೊದಲು ಆಗಬಾರದೆಂದು ಹೇಳಿದ್ದರೂ ಕೂಡ, ಕಾನೂನು ಆದ ಮೇಲೆ ಸದಸ್ಯರು ಹೆಚ್ಚಿನ ಸಂಬಳ ತೆಗೆದುಕೊಂಡಿದ್ದಾರೆ. ಈ ಕಾನೂನು ಆದಮೇಲೆ ತೆಗೆದುಕೊಳ್ಳುತ್ತಾರೆಯೇ ಇಲ್ಲವೇ ಎನ್ನತಕ್ಕಂಥ ಪ್ರಶ್ನೆಯು ಬರುತ್ತದೆ. ಈಗ ಈ ವಿಷಯವನ್ನು ಚರ್ಚೆಮಾಡುವುದು ಬೇಡ. ಆದರೆ 400 ರೂಪಾಯಿಗಳು ಇದ್ದದ್ದನ್ನು ನೂರು ರೂಪಾಯಿ ಪೋಸ್ಟೇಜ್, ಟೆಲಿಫೋನ್ ಚಾರ್ಜ್ ಸೇರಿಸಿ 500 ರೂಪಾಯಿ ಸಂಬಳ ಮಾಡತಕ್ಕ ನಮ್ಮ ಹಣಕಾಸಿನ ಪರಿಸ್ಥಿತಿ ಇದೆಯೇ ಎನ್ನುವ ವಿಷಯವನ್ನು ಕೂಲಂಕಷವಾಗಿ ಪರಿಶೀಲನೆ ಮಾಡಬೇಕು. ಮಾನ್ಯ ಸದಸ್ಯರು ಮಸೂದೆಯನ್ನು ತಂದಿರತಕ್ಕ ಮಾನ್ಯ ತಮ್ಮಯ್ಯನವರು ಲೋಕಸಭೆಯಲ್ಲಿ ಜಾಸ್ತಿ ಮಾಡಿದ್ದಾರೆ ಇನ್ನೂ ಹಲವಾರು ರಾಜ್ಯಗಳಲ್ಲಿ ಜಾಸ್ತಿ ಮಾಡಿದ್ದಾರೆ ಎಂದು ಹೇಳಿದರು. ಲೋಕಸಭೆಯಲ್ಲಿ ಜಾಸ್ತಿ ಮಾಡಿದಾಗ ಅಲ್ಲಿಯೂ ಕೂಡ ಸಾಕಷ್ಟು ಪ್ರತಿಭಟನೆ ಬಂದಿದೆ. ಮೆಜಾರಿಟಿ, ಇದ್ದುದರಿಂದ ಈ ಕಾನೂನು ಅಲ್ಲ ಪಾಸು ಆಗಿರಬಹುದು, ಜಾರಿಗೂ ಬಂದಿರಬಹುದು.

12-30 P.M.

ಹಾಗೆ ಇಲ್ಲಿಯೂ ಬರಬಹುದು, ಬಾರದೇ ಹೋಗಬಹುದು. ಆದರೆ ಬೇರೆ ರಾಜ್ಯಗಳಲ್ಲಿ ಈ ರೀತಿಯಾಗಿದೆ. ಲೋಕಸಭೆಯಲ್ಲಿ ಮತ್ತು ಪಾರ್ಲಮೆಂಟಿನಲ್ಲಿ ಈ ರೀತಿ ಆಗಿದೆ, ನಮಗೆ ಖರ್ಚಿಗೆ ಹಣ ಸಾಲುವುದಿಲ್ಲ, ಈಗ ಬರುವ 400 ರೂಪಾಯಿಗಳು ಸಾಲುವುದಿಲ್ಲವೆಂದು ಹೇಳುವ ಆಧಾರ ನರಿ ಯಲ್ಲ. ನಾವು ದೇಶದ ಆರ್ಥಿಕ ಪರಿಸ್ಥಿತಿಯನ್ನು ನೋಡಬೇಕು. ನಿಜವಾಗಿಯೂ ಹಳ್ಳಿಗಳಲ್ಲಿ

(ಶ್ರೀ ಎಸ್. ಬಂಗಾರಪ್ಪ)

ಗುಡಿಸಲುಗಳಲ್ಲಿ ವಾಸಮಾಡುತ್ತಾ ಇರತಕ್ಕ ಜನರನ್ನು ನಾವು ಮರೆತು ಹೋಗಿದ್ದೇವೆ. ಇನ್ನೂ ನಮ್ಮ ಆರ್ಥಿಕ ಪರಿಸ್ಥಿತಿ ಸುಧಾರಿಸಿಲ್ಲ. ಜೊತೆಗೆ ಈ ಮಸೂದೆಯ ಮುಂದನೆ ಮಾಡತಕ್ಕ ಸಂದರ್ಭವನ್ನೂ ಸಹ ನಾನು ನೋಡಿದ್ದೇನೆ. ಈ ಮಸೂದೆ ಮುಂದನೆ ಮಾಡತಕ್ಕ ಸಂದರ್ಭದಲ್ಲಿ ಒಬ್ಬರೂ ವಿರೋಧ ಮಾಡಲಿಲ್ಲ ಎಂದರೆ ದೇಶದ ಆರ್ಥಿಕ ಪರಿಸ್ಥಿತಿ ಬಗ್ಗೆ ಯಾವ ರೀತಿಯಲ್ಲಿಯೂ ಯೋಚನೆ ಮಾಡಲಿಲ್ಲವೆಂದು ಬರುತ್ತದೆ. ಈ ಮಸೂದೆ ನಾಳೆ ಪಾಸ್ ಆದರೆ ಎಷ್ಟೊಂದು ಹಣಕಾಸಿನ ತೊಂದರೆ ಬರುತ್ತದೆಂಬುದನ್ನು ನೋಡಿದರೆ, ಫೈನಾನ್ಷಿಯಲ್ ಮೆಮೊರಾಂಡಂನಲ್ಲಿ ಈ ಬಾಬಿಗೆ ವರ್ಷಕ್ಕೆ 3 ಲಕ್ಷ 36 ಸಾವಿರ ರೂಪಾಯಿಗಳು ಖರ್ಚಾಗುತ್ತದೆಂದು ಹೇಳಿದ್ದಾರೆ. ಇದು ಸಣ್ಣ ಹಣವಲ್ಲ. ಮೊನ್ನೆತಾನೇ ಎಕ್ಸ್‌ಪೊ 70 ಪ್ರದರ್ಶನ ಬಾಬಿಗಾಗಿ ನುಮಾರು 6 ಲಕ್ಷ ಚಿಲ್ಲರೆ ರೂಪಾಯಿಗಳು ಖರ್ಚಾಗಿ ಸಾಕಷ್ಟು ಹಗರಣ ನಡೆದಿದೆ. ಅದನ್ನು ಮರೆತು ಇವತ್ತು ನುಮಾರು ಮೂರು ವರೆ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ಮತ್ತೆ ಹೇಳುವುದಕ್ಕೆ ಹೊರಟಿದ್ದಾರೆ. ಈಗ ಹಣಕಾಸಿನ ಪರಿಸ್ಥಿತಿ ಬಹಳ ಹದಗೆಟ್ಟಿದೆ. ಮಾನ್ಯ ಸದಸ್ಯರಾದ ಶ್ರೀ ತಮಯ್ಯನವರು ಹೇಳಿದಂತೆ ಅದಕ್ಕೆ 40 ಜನರು ರುಜು ಮಾಡಿರಬಹುದು. ಅದಕ್ಕೆ ಆಧಾರ ಕೂಡ ಇರಬಹುದು. ಆದರೆ ಆ ಆಧಾರದ ವಿಷಯ ಈಗ ಬೇಡ. ಆ ಕಡೆ ಸದಸ್ಯರನ್ನು ನೀವು ಒಪ್ಪಿಸಿರಬಹುದು. ಈ ಮಸೂದೆಯನ್ನು ಈ ಸದನದಲ್ಲಿ ಮುಂದನೆ ಮಾಡುವುದಕ್ಕೆ ಅದನ್ನೇ ಆಧಾರವಾಗಿಟ್ಟುಕೊಳ್ಳಬಾರದು. ಮಾನ್ಯ ಶ್ರೀ ಶಾಮಣ್ಣನವರ ಅಭಿಪ್ರಾಯವನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಹಣಕಾಸಿನ ಪರಿಸ್ಥಿತಿ ಚೆನ್ನಾಗಿಲ್ಲ. ಒಂದುವೇಳೆ ನಾವುಗಳು ನಮ್ಮ ಹಳ್ಳಿಗಳಿಗೆ ಹೋದರೆ ಇಂತಹ ಒಂದು ಉದಾಹರಣೆಯನ್ನು ಕೊಟ್ಟು ನಾವು 100 ರೂಪಾಯಿಗಳ ಸಂಬಳವನ್ನು ಜಾಸ್ತಿಮಾಡಿಕೊಂಡ್ಡು ಬಂದಿದ್ದೇವೆಂದು ಎರಾ ಕಡೆಯೂ ಆಕ್ಷೇಪಣೆ ಮಾಡುತ್ತಾರೆ. ನಮಗೆ ಒಂದು ಸಾವಿರ ರೂಪಾಯಿಗಳನ್ನ ಕೊಟ್ಟರೂ ನಮಗೆ ಸಾಲದೆ ಇರಬಹುದು. ಆದರೆ ಹಳ್ಳಿಗಳಲ್ಲರತಕ್ಕವರ ಗುಡಿಸಲುಗಳನ್ನು ಮರೆತು ನಾವು ಅದನ್ನು ಹೇಗೆ ಒಪ್ಪುವುದು ! ದಯವಿಟ್ಟು ಮಾನ್ಯ ಶ್ರೀ ತಮ್ಮಯ್ಯನವರು ಈ ಮಸೂದೆಯನ್ನು ಒತ್ತಾಯ ಮಾಡದೆ ಹಿಂದಕ್ಕೆ ತೆಗೆದುಕೊಳ್ಳಬೇಕು. ಈ ದೇಶದ ಹಣಕಾಸಿನ ಪರಿಸ್ಥಿತಿ ಎಲ್ಲ ಸದಸ್ಯರಿಗೂ ಗೊತ್ತಿದೆ. ಪುನಃ ಆದನ್ನು ಪ್ರಸ್ತಾಪ ಮಾಡುವುದು ಬೇಡ. ಆ ಕಡೆ ಕೂತಿರುವ ಎಲ್ಲ ಸದಸ್ಯರಲ್ಲಿಯೂ ನಾನು ಕೇಳಿಕೊಳ್ಳುವುದೇನೆಂದರೆ, ಈಗ ಮುಂದನೆ ಮಾಡಿರುವ ಮಸೂದೆಯನ್ನು ನಿಜವಾಗಿಯೂ ಪಾಸ್ ಆಗುವುದಕ್ಕೆ ಬಿಡಬೇಡಿ. ಇದರಿಂದ ಕೆಟ್ಟ ವಾತಾವರಣ ಉಂಟಾಗದೇ ಇರುವಂತೆ ಮಾಡಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ. ಆದ್ದರಿಂದ ದಯವಿಟ್ಟು ಮಾನ್ಯ ಶ್ರೀ ತಮ್ಮಯ್ಯನವರು ಈ ಮಸೂದೆಯನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ನಾನು ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ.

Sri H. SIDDAVEERAPPA.—Our Party is opposed to the introduction of this Bill. I would like to know from the Treasury Benches whether they have placed this Bill.

Sri K. H. SRINIVASA.—I do not know the opinion of the Treasury Benches. But I want to make some points clear on my behalf and on behalf of some of my friends from my party.

ಮಾನ್ಯ ಅಧ್ಯಕ್ಷರೇ, ಈ ಬಿಲ್ಲನ್ನು ನಾವು ವಿರೋಧಿಸದೇ ಇರುವುದಕ್ಕೆ ಮುಖ್ಯ ಕಾರಣವೇನೆಂದರೆ, ತಮಗೇ ಗೊತ್ತಿದೆ. ಈ ಸಭೆಯಲ್ಲಿ ಒಂದು ಸಂಪ್ರದಾಯವಿದೆ. ಆದಿಯಿಂದಲೂ ಖಾಸಗಿ ಸದಸ್ಯರ ವಿಧೇಯಕ ಬಂದಾಗ ಅದನ್ನು ಇಂಟ್ರಡ್ಯೂಸ್ ಮಾಡುವಂಥ ಸ್ಟೇಜಿನಲ್ಲಿ ನಮಗೆ ವಿರೋಧ ವಿದ್ದರೂ ನಾವು ವಿರೋಧ ಮಾಡುವುದಿಲ್ಲವೆಂಬ ಸಂಪ್ರದಾಯ ಇದೆ.

ಶ್ರೀ ಟಿ. ಆರ್. ಶಾಮಣ್ಣ.—ಹಿಂದೆ ಒಂದು ಸಾರಿ ಮಾನ್ಯ ಶ್ರೀ ಪುಟ್ಟಸ್ವಾಮಿಯವರೇ ಇಂತಹ ಒಂದು ಬಿಲ್ಲನ್ನು ಇಂಟ್ರಡ್ಯೂಸ್ ಮಾಡುವಂಥ ಸ್ಟೇಜಿನಲ್ಲಿ ವಿರೋಧ ಮಾಡಿದ್ದಾರೆ.

ಶ್ರೀ ಕೆ. ಎಚ್. ಶ್ರೀನಿವಾಸ.—ಇಂತಹ ಬಿಲ್ಲನ್ನು ಮುಂದನೆ ಮಾಡುವಾಗ ಇಂಟ್ರಡಕ್ಷನ್ ಸ್ಟೇಜಿನಲ್ಲಿ ಖಾಸಗಿ ವಿಧೇಯಕವನ್ನು ವಿರೋಧಮಾಡುವಾರವೆಂಬ ಒಂದು ಸಂಪ್ರದಾಯವನ್ನು ನಾವು ಇಟ್ಟುಕೊಂಡಿದ್ದೇವೆ.

ಶ್ರೀ ಎಚ್. ಸಿದ್ದವೀರಪ್ಪ.—ಹಿಂದೆ ನಿಮ್ಮ ಮಂತ್ರಿಗಳೇ ವಿರೋಧ ಮಾಡಿದ್ದಾರೆ. The hon. Member Sri Srinivasa may refresh his memory.

Sri K. H. SRINIVASA.—That may be an exceptional incident, but I stand on convention.

ನಾವೆಲ್ಲರೂ ಈ ರೀತಿ 100 ರೂಪಾಯಿಗಳನ್ನು ಜಾಸ್ತಿಮಾಡಿಕೊಳ್ಳಬೇಕು ಎಂದು ಹೇಳಿ, ಏನಾದರೂ ಮಾನ್ಯ ಶ್ರೀ ತಮ್ಮಯ್ಯನವರಿಗೆ ಒತ್ತಾಯ ತಂದು ಅದಕ್ಕೆ ಪ್ರಯತ್ನಮಾಡುತ್ತಿದ್ದೇವೆಂದು ನನ್ನ ಸ್ನೇಹಿತರಾದಂಥ ಮಾನ್ಯ ಶ್ರೀ ಬಂಗಾರಪ್ಪನವರ ಮಾತಿನಲ್ಲಿ ಕಂಡುಬರುತ್ತಿದೆ. ಆ ಒಂದು ತಪ್ಪು ಆರೋಪನೆಯನ್ನು ನಿವಾರಿಸುವುದಕ್ಕೋಸ್ಕರ ಇಷ್ಟು ವಿಷಯಗಳನ್ನು ನಾನು ಸ್ಪಷ್ಟಪಡಿಸುತ್ತೇನೆ. ನೀವಾರು 40-45 ಜನರು ಅದಕ್ಕೆ ರುಜು ಹಾಕಿದ್ದಾರೆಂಬ ಪಟ್ಟಿಯಲ್ಲಿ ಯಾರಾ್ಯರ ಹೆಸರುಗಳಿವೆ, ಅವರು ಯಾವ್ಯಾವ ಪಕ್ಷಕ್ಕೆ ಸೇರಿದ್ದಾರೆಂಬುದು ನನಗೆ ಗೊತ್ತಿಲ್ಲ. ನಮ್ಮ ಪಕ್ಷದಲ್ಲಿ 45ಮಂದಿ ರುಜು ಮಾಡಿಸಿದ್ದೇನೆಂದು ಹೇಳಬಹುದು. ಆದರೆ ನಾನು ವೈಯಕ್ತಿಕವಾಗಿ ಹೇಳಬೇಕಾದರೆ ನಾನು ಅದರಲ್ಲಿ ರುಜುಮಾಡಲಿಲ್ಲ. ಈ ಸಭೆಯ ಸದಸ್ಯರ ಅಭಿಪ್ರಾಯ ಏನೆಂಬುದನ್ನು ತಿಳಿಯಬೇಕು. ಈ ಮಾನ್ಯ ಸದಸ್ಯರಲ್ಲಿ ನಿರ್ಗತಿಕ ಸದಸ್ಯರು ಕೆಲವರು ಇದ್ದಾರೆ. ಚುನಾವಣೆಯಲ್ಲಿ ಠೇವಣಿ ಮಾತ್ರ ಕಟ್ಟಿ ಬಂದಿರುವವರೂ ಇದ್ದಾರೆ. ಬೇಕಾದಷ್ಟು ಖರ್ಚು ಬಂದರೂ ಅದನ್ನು ನಿರ್ವಹಿಸುತ್ತೇವೆಂದು ಹೇಳುವವರೂ ಕೆಲವರು ಇದ್ದಾರೆ. ಸ್ವಲ್ಪ ತೊಂದರೆಯಾದರೂ ಹೇಗೋ ಖರ್ಚನ್ನು ಅಡ್ಜಸ್ಟ್ ಮಾಡಿಕೊಂಡು ದೇಶಕ್ಕೂ ಭಾರ ಆಗಬಾರದು ತಮಗೂ ಅನ್ಯಾಯವಾಗಬಾರದೆಂದು ಹೇಳುವವರೂ ಕೆಲವರು ಇದ್ದಾರೆ. ಹೀಗೆ ನಾನಾ ಸ್ಥಿತಿಯುಳ್ಳರತಕ್ಕ ಸದಸ್ಯರು ಇಲ್ಲಿದ್ದಾರೆ. ದೇಶದ ಆರ್ಥಿಕ ಪರಿಸ್ಥಿತಿಯ ದೃಷ್ಟಿಯಿಂದ ಮತ್ತು ಸದಸ್ಯರ ಸರ್ವಸಾಮಾನ್ಯ ಪರಿಸ್ಥಿತಿಯ ದೃಷ್ಟಿಯಿಂದ ಅವರ ಸೌಲಭ್ಯಗಳು ಇನ್ನೂ ಏನೇನು ಇರಬೇಕೆಂಬುದನ್ನು ವಿವೇಚನೆಯುವುದು ಅಗತ್ಯ. ಯಾರೋ ಒಬ್ಬ ಸದಸ್ಯರ ಮನಸ್ಸಿನಲ್ಲಿ ಇದು ಬಂದಿದೆಯೆಂದು ನಾವು ಇದನ್ನು ಹೆಚ್ಚಿಸಿಕೊಳ್ಳುವ ಅಗತ್ಯವಿಲ್ಲ. ಬೇರೆ ದೇಶಗಳಿಗೆ ಹೋಲಿಸಿ ನೋಡಿ ನಮ್ಮ ಸದಸ್ಯರ ಪರಿಸ್ಥಿತಿಯನ್ನು ವಿವೇಚಿಸಿ ನೋಡಿ. ಇಲ್ಲಿ ಏನು ಸೌಲಭ್ಯಗಳು ಸದಸ್ಯರಿಗೆ ಇರಬೇಕೆಂದು ನಿರ್ಧರಿಸುವುದು ಎಲ್ಲ ಪಕ್ಷಗಳಿಗೂ ಸೇರಿದ್ದು, ಈ ಸಭೆಯಲ್ಲಿ ಏನಾದರೂ ಒಮ್ಮತ ಬಂದರೆ, ದಕ್ಕೆ ಪುರಸ್ಕಾರ ಕೊಡಬೇಕು ನಾವು ಇಷ್ಟು ಬಂದ ರೀತಿಯಲ್ಲಿ ಹೆಚ್ಚಿಸಿಕೊಳ್ಳುವುದಕ್ಕಾಗುವುದಿಲ್ಲ ಇದು ನನಗೆ ಇಷ್ಟವಿಲ್ಲ. ಆ ದೃಷ್ಟಿಯಿಂದ ನನ್ನ ವೈಯಕ್ತಿಕ ವಿರೋಧವನ್ನು ಸೂಚನೆ ಮಾಡುತ್ತೇನೆ. ಈಗ ಈ ಬಿಲ್ ಓಟಿಗೆ ಬಂದರೆ ಆಗ ಎಲ್ಲರಿಗೂ ವೈಯಕ್ತಿಕ ಇಚ್ಛೆ ಪ್ರಕಾರ ಓಟು ಮಾಡುವುದಕ್ಕೆ ಅಧಿಕಾರ ಇರಬೇಕೆಂದು ನಾನು ಈ ಸಂದರ್ಭದಲ್ಲಿ ಸ್ಪಷ್ಟಪಡಿಸುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಶ್ರೀ ಸಿದ್ದವೀರಪ್ಪನವರು ಈ ವಿಧೇಯಕಕ್ಕೆ ಆಡಳಿತ ಪಕ್ಷದ ಅಶೀರ್ವಾದ, ಬೆಂಬಲ ಏನಾದರೂ ಇದೆಯೇ ಎಂದು ಕೇಳಿದರು. ನಾನು ಈಗ ಮಾನ್ಯ ಶ್ರೀನಿವಾಸ್ ಅವರು ಪಕ್ಷದ ಕಾರ್ಯದರ್ಶಿಯಾಗಿ ಹೇಳುತ್ತಿದ್ದಾರೆಂದು ತಿಳಿದುಕೊಂಡಿದ್ದೇನೆ. ಒಂದು ವೇಳೆ ಅವರು ಸ್ವಂತ ಅಭಿಪ್ರಾಯವನ್ನು ಹೇಳಿದ್ದರೆ, ಪಕ್ಷದ ಅಭಿಪ್ರಾಯವನ್ನು ಮಂತ್ರಿಗಳಾಗಲೀ ಅಥವಾ ಯಾರಾದರೂ ಒಬ್ಬರು ತಿಳಿಸಬಹುದಲ್ಲವೇ ?

Mr. SPEAKER.—It is left to the Ministers. I cannot compel them. If they want to speak, I might permit them.

ಶ್ರೀ ಎಂ. ಎಸ್. ಕೃಷ್ಣನ್.—ಈ ತರಹ ಬಿಲ್ಲನ್ನು ವಿರೋಧ ಪಕ್ಷದ ಸ್ನೇಹಿತರು ಮಂಡಿಸಿದ್ದಾರೆಂದು ನನಗೆ ಆಶ್ಚರ್ಯವಾಗುತ್ತದೆ.

Sri K. H. SRINIVAS.—I rise to a point of order. Even after I have made the point very clear, to make a general allegation that the Congress-O Party has tried to get it done through the members of the Opposition is not very fair.

Mr. SPEAKER.—At this stage, under rule 71, the hon. Member can state only the grounds of his opposition to the Bill. It is better hon. Member avoids casting reflections on any member or any party.

†ಶ್ರೀ ಎಂ.ಎಸ್. ಕೃಷ್ಣನ್ (ಮಲ್ಲೇಶ್ವರಂ).—ನಾನು ಏತಕ್ಕೋಸ್ಕರ ವಿರೋಧಿಸುತ್ತೇನೆಂಬುದನ್ನು ಹೇಳುತ್ತೇನೆ. ಮಾನ್ಯ ಶ್ರೀನಿವಾಸರವರಿಗೆ ಏಕೆ ಇಷ್ಟು ಮೈ ಚುಚ್ಚುತ್ತದೆಂದು ನನಗೆ ಗೊತ್ತಾಗಿಲ್ಲ. ಎರಡು ಕಾರಣಗಳಿಂದ ನಾನು ಇದನ್ನು ವಿರೋಧಿಸುತ್ತೇನೆ. ಮೊದಲನೆಯ ಕಾರಣ, ಈ ತರದ ಒಂದು ಬಿಲ್ಲು ಬಂದಿರುವುದು ಬಹಳ ಆಶ್ಚರ್ಯಕರವಾಗಿದೆ. ಈಗಾಗಲೇ ನಮಗೆ ಏನು 400 ರೂಪಾಯಿ ಕೊಡುತ್ತಿದ್ದಾರೆ, ಅದಕ್ಕೇನೇ ಊರಿನಲ್ಲಿ ಎರ್ರಾ ಬೊಚ್ಚೆ ಹಾಕುತ್ತಿದ್ದಾರೆ.

ಶ್ರೀ ಎಸ್. ವಿ. ಅಗ್ನಿಹೋತ್ರಿ.—ನೀವು ಬಿಡುತ್ತೀರೇನು ?

ಶ್ರೀ ಎಂ. ಎಸ್. ಕೃಷ್ಣನ್.—ಅದಕ್ಕೆ ನಮ್ಮ ಕಡೆಯಿಂದ 500 ರೂಪಾಯಿ ಮಾಡಿ ಎಂದು ಯಾರೂ ಹೇಳಿಲ್ಲ. ಯಾರನ್ನೋ ಎಳಕೊಂಡು ಅದನ್ನು ಇಲ್ಲಿ ತಂದಿದ್ದೀರಿ.

ಶ್ರೀ ಎಸ್. ವಿ. ಅಗ್ನಿಹೋತ್ರಿ.—ಅದನ್ನು ಎಸ್. ವಿ. ಡಿ. ಪ್ರತಿನಿಧಿ ಮುಂಡಿಸಿದ್ದಾರೆ, ನಾವಲ್ಲ.

ಶ್ರೀ ಎಸ್. ಬಂಗಾರಪ್ಪ.—ಎಸ್. ವಿ. ಡಿ. ಮೆಂಬರ್ ತಂದದ್ದು ಎಂದು ಹೇಳಿದ್ದೀರಿ. ಹಾಗೆ ತಂದವರು ಎಸ್. ವಿ. ಡಿ. ಮೆಂಬರ್ ಆಗ ಆಗಿರಲಿಲ್ಲ. ನಾವು ಅದರ ಬಗ್ಗೆ ಎರ್ಲಾ ಚರ್ಚೆ ಮಾಡಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಕನ್ನಡದಲ್ಲಿ ಒಂದು ಗಾದೆ ಇದೆ, ಕುಂಬಳ ಕಾಯಿಕಳ್ಳ ಅಂದರೆ, ಹೆಗಲು ಮುಟ್ಟಿ ನೋಡಿದ ಎಂದು.

ಶ್ರೀ ಎಸ್. ವಿ. ಅಗ್ನಿಹೋತ್ರಿ.—ನನಗೆ ತಿಳಿದ ಮಟ್ಟಿಗೆ ಹೇಳುವುದಾದರೆ, ಯಾರೋ ಒಬ್ಬರು ಕಮ್ಯುನಿಸ್ಟ್ ಸದಸ್ಯರು ತಮ್ಮಯ್ಯನವರಿಗೆ ಹೇಳಿಸಿ ಇದನ್ನು ತಂದಿದ್ದಾರೆಂದು ನಾನು ಹೇಳುತ್ತೇನೆ. ಏಕೆಂದರೆ ಅವರಿಗೂ ರ್ಯಾಂಡ್ ಗ್ರಾಫ್, ಟೆಲಿಫೋನ್ ಗ್ರಾಫ್ ಎರ್ಲಾ ಮಾಡುವುದಕ್ಕೆ ಹಣ ಬೇಕಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಇಷ್ಟು ಮಾತ್ರ ಹೇಳುತ್ತೇನೆ. ಮಾನ್ಯ ತಮ್ಮಯ್ಯನವರು ತಂದಿರುವಂತಹ ಈ ಬಿಲ್ಲನ್ನು ನಾನು ಬಹು ಕಟುವಾಗಿ ವಿರೋಧಿಸುತ್ತೇನೆ. ಏಕೆಂದರೆ, ಇದನ್ನು ಯಾರೋ ಪ್ರೇರೇಪಣೆ ಮಾಡಿ ತೆಗೆದುಕೊಂಡು ಬಂದಿದ್ದಾರೆ. ಹೋದನಲ ನಮ್ಮ ಅರೋಪೆನ್ಸ್ ಎರ್ಲಾ ಜಾಸ್ತಿ ಮಾಡಿಕೊಂಡಿದ್ದೇವೆ. ಅದೇ ಮಾಡಿದ್ದು ಜಾಸ್ತಿಯಾಗಿದೆ. ಇದರಿಂದ ನಮ್ಮ ಹೆಸರಿಗೆ ಒಳ್ಳೆಯ ಕೀರ್ತಿ ಬರುವುದಿಲ್ಲ, ಜನರೆರ್ಲಾ ಬಯ್ಯುತ್ತಾರೆ ಅಷ್ಟೆ. ಆದ್ದರಿಂದ ಇದು ನ್ಯಾಯವಾದುದಲ್ಲ, ಸರಿಯಾದುದಲ್ಲವೆಂದು ಹೇಳುತ್ತೇನೆ.

ಶ್ರೀ ಎಂ. ಎನ್. ರಾಮಣ್ಣ —ಬಿರ್ ಮೂವ್ ಮಾಡಬಹುದೇ ಇಲ್ಲವೇ ಎಂಬುದರ ಬಗ್ಗೆ ಮಾನ್ಯ ಸದಸ್ಯರು ಮಾತನಾಡಬೇಕು.

Mr. SPEAKER.—The question is :

"That leave to introduce the Mysore Legislature Salaries (Amendment) Bill, 1970, be granted."

The motion was negatived.

City of Bangalore Municipal Corporation (Amendment) Bill, 1970

Leave to introduce

Sri T. R. SHAMANNA.—Sir, I beg to move for leave to introduce the City of Bangalore Municipal Corporation (Amendment) Bill, 1970.

Mr. SPEAKER.—The question is :

"That leave to introduce the City of Bangalore Municipal Corporation (Amendment) Bill, 1970 be granted."

The motion was adopted.

Mr. SPEAKER.—Leave is granted.

Sri T. R. SHAMANNA.—Sir, I beg to move :

"That the City of Bangalore Municipal Corporation (Amendment) Bill, 1970 be introduced."